ಹೆಸರನ್ನು ಬಹು ತನ್ನ ಕಾವ್ಯನಾಮವಾಗಿಯೂ ಬಳಸಿದನು. ಅವನ ಅಭಿಮಾನಿಗಳು ಹಾಗೂ ಅನುಯಾಯಿಗಳು ಬಹುಗೆ ಕೊಟ್ಟ ಹೆಸರು 'ಸುಲ್ತಾನ್.'

ಬಹು ಕ್ರಮಬದ್ಧ ಶಾಲಾ ಶಿಕ್ಷಣವನ್ನು ಪಡೆಯಲಿಲ್ಲ, ಮತ್ತು ಇದು ಸೂಫಿ ತತ್ವಗಳಿಗೆ ಸೂಕ್ತವಾಗಿತ್ತು ಎಂದು ಹೇಳಲಾಗುತ್ತದೆ. (ಔಪಚಾರಿಕ ಶಿಕ್ಷಣವನ್ನು ಪಡೆದರೆ ಅದು ಪರಮಾತ್ಮನ ಪ್ರೇಮವನ್ನು ಗ್ರಹಿಸಲು ಅಡ್ಡಿಯಾಗುತ್ತದೆ ಎಂದು ಅವರು ನಂಬಿದ್ದರು. ಆ ಕಾರಣದಿಂದಲೇ ಅನೇಕ ಸೂಫಿ ಸಂತರು ಪರಮಾತ್ಮನ ಹೆಸರನ್ನು ಮಾತ್ರ ಓದಲು ಕಲಿತಿದ್ದರು ಮತ್ತು ಅಂತಹವರೇ ಅನೇಕ ಪವಾಡಗಳನ್ನು ಮಾಡಲು ಸಮರ್ಥರಾಗಿದ್ದರು ಎಂದು ಐತಿಹ್ಯಗಳು ಹೇಳುತ್ತವೆ.) ಆದರೆ, ಬಹು ಪರ್ಶಿಯನ್ ಭಾಷೆಯಲ್ಲಿ ಸೂಫಿ ಪಂಥವನ್ನು ಕುರಿತು ಬರೆದಿರುವ ಅನೇಕ ತತ್ವಶಾಸ್ತ್ರೀಯ ಕೃತಿಗಳನ್ನು ಗಮನಿಸಿದರೆ, ಅವನು ಒಂದಲ್ಲಾ ಒಂದು ಬಗೆಯ ಶಿಕ್ಷಣವನ್ನು ಪಡೆದ ವಿದ್ವಾಂಸನಾಗಿದ್ದನು ಎಂದು ಅನಿಸುತ್ತದೆ.

ತನ್ನ ತಾರುಣ್ಯದಲ್ಲಿ ಸ್ವಲ್ಪ ಕಾಲ ಬಹು ಕೃಷಿಯನ್ನು ಮಾಡಲು ಪ್ರಯತ್ನಿಸಿದನು. ಅದರೆ ಅದು ಅರ್ಥಹೀನವೆಂದು ಬಹು ಬೇಗ ಅದನ್ನು ಕೈಬಿಟ್ಟು, ಕಾಡುಗಳಲ್ಲಿ ಮತ್ತು ಸಮಾಧಿ ಸ್ಥಳಗಳಲ್ಲಿ ಅಲೆದಾಡಲು ಶುರುಮಾಡಿದನು. ಅವನ ಅಲೆದಾಟದಲ್ಲಿ, ಒಮ್ಮೆ, ಬಹು ಹಬಿಬುಲ್ಲಾ ಖಾನ್ ಎಂಬ ಸೂಫಿಯನ್ನು ಭೇಟಿ ಮಾಡಿದನು, ಮತ್ತು ಸ್ವಲ್ಪ ಕಾಲ ಆ ಸೂಫಿಯೇ ಬಹುವಿನ ಮೊದಲ ಆಧ್ಯಾತ್ಮಿಕ ಗುರುವಾಗಿದ್ದನು. ಸ್ವಲ್ಪ ಕಾಲದಲ್ಲಿಯೇ ಹಬಿಬುಲ್ಲಾ ಖಾನ್ ಬಹುವಿನ ಅಪರೂಪದ ಅನುಭಾವೀ ಸಾಧ್ಯತೆಗಳನ್ನು ಅರಿತು, ಬಹುವನ್ನು ದೆಹಲಿಯಲ್ಲಿದ್ದ ತನ್ನ ಗುರು ಸೈಯಿದ್ ಅಬ್ದುರ್ ರಹಮಾನ್ ಬಳಿ ಕಳಿಸಿದನು. ದೆಹಲಿಗೆ ಹೋದ ಬಹು ಸಾಕಷ್ಟು ಕಾಲ ಸೈಯಿದ್ ಅಬ್ದುರ್ ರಹಮಾನ್ ಶಿಷ್ಯನಾಗಿ ದೆಹಲಿಯಲ್ಲಿಯೇ ಇದ್ದನು; ಆ ಕಾಲಘಟ್ಟದಲ್ಲಿಯೇ ಅವನು ತನ್ನ ಗುರುವಿನಿಂದ ಸೂಫಿ ಪಂಥದ ಬಗ್ಗೆ ಬಹಳಷ್ಟು ಕಲಿತನೆಂದು ಹೇಳಲಾಗುತ್ತದೆ.

ದೆಹಲಿಯಲ್ಲಿದ್ದಾಗಲೇ ಒಮ್ಮೆ ಬಹು ಮುಂದೆ ದೆಹಲಿ ಸಿಂಹಾಸನವನ್ನೇರಿದ ಔರಂಗಜ಼ೇಬ್‌ನನ್ನು ಭೇಟಿಯಾದನೆಂದು ಅವನ ಅನುಯಾಯಿಗಳು ಬರೆದಿರುವ ಬಹುವಿನ ಜೀವನಚರಿತ್ರೆಗಳು ದಾಖಲಿಸುತ್ತವೆ. ಆದರೆ, ಅವರಿಬ್ಬರ ನಡುವೆ ಅಷ್ಟೇನೂ ಗಾಢ ಸ್ನೇಹ ಬೆಳೆಯಲಿಲ್ಲವೆಂದು ಕಾಣುತ್ತದೆ. ಬಹು, ಔರಂಗಜ಼ೇಬ್‌ನ ರಾಜಕೀಯ-ಧಾರ್ಮಿಕ ವಿಚಾರಗಳನ್ನು ಸ್ವಲ್ಪವೂ ಬದಲಾಯಿಸಲಾಗಲಿಲ್ಲ; ಅದೇ ರೀತಿ ಭವಿಷ್ಯದ ಚಕ್ರವರ್ತಿಯ ಪರಿಚಯದಿಂದ ಬಹುವಿಗಾಗಲಿ ಅವನ ಅನುಯಾಯಿಗಳಿಗಾಗಲಿ ಯಾವುದೇ ಲಾಭವಾಗಲಿಲ್ಲ. ಅವರಿಬ್ಬರ ಸಂಬಂಧಕ್ಕೆ ಕಾರಣ ಬಹುವಿನ ಗುರು (ಅಬ್ದುರ್ ರಹಮಾನ್) ಔರಂಗಜ಼ೇಬನ ಸಹೋದರ ದಾರಾ ಶಿಕೋವ್‌ಗೆ ತನ್ನ ಮದುವೆಯ ಮೂಲಕ ಸಮೀಪವಾಗಿದ್ದುದು.

ದೆಹಲಿಯಲ್ಲಿ ಬಹು ಎಷ್ಟು ಕಾಲ ಇದ್ದನು ಹಾಗೂ ಅವನು ತನ್ನ ಹುಟ್ಟೂರಿಗೆ ಯಾವಾಗ ಹಾಗೂ ಯಾವ ಕಾರಣಕ್ಕೆ ಹಿಂದಿರುಗಿದನು ಎಂಬುದು ಗೊತ್ತಿಲ್ಲ; ಆದರೆ, ಹಿಂತಿರುಗಿದ ನಂತರ ಕೊನೆಯವರೆಗೂ ಬಹು ತನ್ನೂರಿನಲ್ಲಿಯೇ ಜೀವಿಸಿದನು. ಅವನು ನಾಲ್ಕು ಬಾರಿ ಮದುವೆ ಮಾಡಿಕೊಂಡನೆಂದು ಮತ್ತು ಅವನಿಗೆ ಎಂಟು ಗಂಡು ಮಕ್ಕಳಿದ್ದರೆಂದು ಹೇಳಲಾಗುತ್ತದೆ. 1691ರಲ್ಲಿ ಬಹು ವಿಧಿವಶನಾದನು.

ಪರ್ಷಿಯನ್ ಭಾಷೆಯಲ್ಲಿ ಬಹು ಅನೇಕ ಗದ್ಯ-ಪದ್ಯ ಕೃತಿಗಳನ್ನು ರಚಿಸಿದನು. ಅವನ ಜೀವನ ಚರಿತ್ರಕಾರರು ಹೇಳುವಂತೆ ಅವನು ಒಟ್ಟು 140 ಕೃತಿಗಳನ್ನು ರಚಿಸಿದನು; ಆದರೆ, ಈಗ ದೊರಕುವ ಕೃತಿಗಳು ಕೇವಲ 26. ಬಹುವಿನ ಪರ್ಷಿಯನ್ ಕೃತಿಗಳು ಹೆಚ್ಚಾಗಿ ಸೂಫಿ ಧರ್ಮದ ಬಗ್ಗೆ ಬರೆದ ತಾತ್ವಿಕ ಗ್ರಂಥಗಳಾದುದರಿಂದ ಅವುಗಳ ಓದುಗರು ಹೆಚ್ಚಿಲ್ಲ. ಬಹುವಿನ ಕೀರ್ತಿಗೆ ಕಾರಣ ಅವನು ಪಂಜಾಬಿ ಭಾಷೆಯಲ್ಲಿ ರಚಿಸಿದ ಕಾವ್ಯ. ಅವನ ಎಲ್ಲಾ ಕವನಗಳು, ಹಾಡುಗಳು, ಮತ್ತು ನುಡಿಗಳು 'ಅಬ್ಯತ್' ಎಂಬ ಛಂದೋರೂಪದಲ್ಲಿವೆ (ಅಬ್ಯತ್ ಎಂದರೆ ಎರಡು ಸಾಲುಗಳ ಒಂದು ಪದ್ಯ; ದ್ವಿಪದಿ. ಒಂದು ಕವನದಲ್ಲಿ ಒಂದೇ ದ್ವಿಪದಿ ಇರಬಹುದು ಅಥವಾ ಒಂದಕ್ಕಿಂತ ಹೆಚ್ಚಿರಬಹುದು); ಮತ್ತು ಅವುಗಳ ಭಾಷೆ ಸರಳವಾಗಿದ್ದು, ಅವುಗಳನ್ನು ಇಂದು ಒಂದು ವಿಶಿಷ್ಟ ರೀತಿಯಲ್ಲಿ ಹಾಡುತ್ತಾರೆ.

ಬಹುವಿನ ಕೃತಿಗಳು ಉರ್ದು ಭಾಷೆಗೆ ಅನುವಾದವಾಗಿವೆ; ಮತ್ತು ಅವನ ಪಂಜಾಬಿ ದ್ವಿಪದಿಗಳು ಇಂಗ್ಲೀಷ್‌ಗೂ ಅನುವಾದವಾಗಿವೆ. ಇಂಗ್ಲೀಷ್‌ನಲ್ಲಿ ಪ್ರಸಿದ್ಧ ಅನುವಾದವೆಂದರೆ: James L. Elias, Death Before Dying: